ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೋಟಗಾರಿಕೆ ಅಧೀಕ್ಷಕರು (ಪೂರ್ವ ವಲಯ) ರವರ ಕಛೇರಿ, 17ನೇ ಮಹಡಿ, ಪಿ.ಯು.ಕಟ್ಟಡ ಎಂ.ಜಿ.ರಸ್ತೆ, ಮೇಯೊಹಾಲ್ ಬೆಂಗಳೂರು.**

ಸಂಖ್ಯೆ : ತೋ.ಅ(ಪೂ)/448/2020-21 ದಿನಾಂಕ : 11/2/2021

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಂತಿನಗರ ವಿಭಾಗ, ಪೂರ್ವ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ : 117 ಶಾಂತಿನಗರದ ವಾರ್ಡ್ ಸಮಿತಿ ಸಭೆಯನ್ನು ಕೆನೋಪಿ ರೆಸ್ಟೋರೆಂಟ್, ಪಿ.ಯು.ಕಟ್ಟಡ, ಎಂ.ಜಿ.ರಸ್ತೆ ಬೆಂಗಳೂರು-01, ಇಲ್ಲಿ ದಿನಾಂಕ : 06-02-2021ರಂದು ಬೆಳಿಗ್ಗೆ:10.00 ಗಂಟೆಗೆ ಸಭೆಯಲ್ಲಿ ಚರ್ಚಿಸಲಾದ ಸಭೆಯ ನಡವಳಿಗಳು

ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು

| ಕ್ರ.ಸಂ | ಸದಸ್ಯರ ಹೆಸರುಗಳು |
|---|---|
| 1 | ಶ್ರೀ ಸಂತೋಷ್ ಕುಮಾರ್ ನೋಡಲ್ ಅಧಿಕಾರಿ (ಶಾಂತಿನಗರ 117) ಹಾಗೂ ತೋಟಗಾರಿಕೆ ಅಧಿಕ್ಷಕರು (ಪೂರ್ವ ವಲಯ) |
| 2 | ಶ್ರೀ ಮಧು ಆರ್. ಕಾರ್ಯಪಾಲಕ ಅಭಿಯಂತರರು, ಶಾಂತಿನಗರ ವಿಭಾಗ |
| 3 | ಶ್ರೀಮತಿ ಎಂ. ಫರ್ಜಾನಾ, ಸಹಾಯಕ ಅಭಿಯಂತರರು, (ಶಾಂತಿನಗರ) ವಾರ್ಡ್ ಕಮಿಟಿ ಕಾರ್ಯದರ್ಶಿ. |
| 4 | ಶ್ರೀ ಅಭಿಷೇಕ್, ಕಿರಿಯ ಆರೋಗ್ಯ ಪರಿವೀಕ್ಷಕರು (ಶಾಂತಿನಗರ) |
| 5 | ಶ್ರೀ ಬಸವರಾಜ, ಸಹಾಯಕ ಕಂದಾಯ ಅಧಿಕಾರಿಗಳು (ಶಾಂತಿನಗರ) |
| 6 | ಶ್ರೀ ಈಶ್ವರ್, ಕಂದಾಯ ಪರಿವೀಕ್ಷಕರು (ಶಾಂತಿನಗರ) |
| 7 | ಶ್ರೀಮತಿ ಶೀಲ್ಪಾ, ಸಹಾಯಕ ಅಭಿಯಂತರರು, ಬೃಹತ್ ನೀರು ಗಾಲುವೆ ಶಾಂತಿನಗರ |
| 8 | ಶ್ರೀ ಶ್ರೀನಿವಾಸ, ಸಹಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, |
| 9 | ಶ್ರೀ ಅಕ್ರಮ್ ಪಾಷ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, |
| 10 | ಶ್ರೀ ನಂಜುಂಡಯ್ಯ ಕಿರಿಯ ಅಭಿಯಂತರರು(ಛೌರವಲ್) |
| 11 | ಶ್ರೀಮತಿ ಸರೀತಾ, ಸದಸ್ಯರು (ಶಾಂತಿನಗರ) |
| 12 | ಶ್ರೀ ಆರ್. ಪುರುಷೋತ್ತಮ್, ಸದಸ್ಯರು (ಶಾಂತಿನಗರ) |
| 13 | ಶ್ರೀ ಎಸ್.ಎನ್ ರಾಜು, ಸದಸ್ಯರು (ಶಾಂತಿನಗರ) |
| 14 | ಶ್ರೀ ವೆಂಕಟೇಶ್ ಎಂ. ಸದಸ್ಯರು (ಶಾಂತಿನಗರ) |
| 15 | ಶ್ರೀ ಜಗದೀಶ್ ಎಂ. ಸದಸ್ಯರು (ಶಾಂತಿನಗರ) |
| 16 | ಶ್ರೀ ಇಸ್ಮಾಯಿಲ್ ಮಿರ್ಜಾ, ಸದಸ್ಯರು (ಶಾಂತಿನಗರ) |

ಸ್ಥಳಿಯ ಶಾಸಕರಾದ ಎನ್. ಎ. ಹ್ಯಾರೀಷ್ ರವರ ಅಧ್ಯಕ್ಷತೆಯಲ್ಲಿ ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸುತ್ತಾ ಮುಖ್ಯ ವಿಷಯದ ಬಗ್ಗೆ ಚರ್ಚಿಸಲು ತಿಳಿಸಿದರು.

East Zone
448
11/2/2021
Mahanagara Palike

Scanned with CamScanner

ಸಮಿತಿ ಅಧ್ಯಕ್ಷರು ಮಾತನಾಡುತ್ತಾ ದಿನಾಂಕ : 22-01-2021ರಂದು ನಡೆದ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತಾ ಶ್ರೀ ಸಂತೋಷ್ ಕುಮಾರ್ ವಾರ್ಡಿನ ನೋಡಲ್ ಅಧಿಕಾರಿಯವರು ಸಭೆಯನ್ನು ಹಿಂದಿನ ಸಭೆಯ ನಡುವಳಿಗಳನ್ನು ಚರ್ಚಿಸುತ್ತಾ ಸಭೆಯನ್ನು ಪ್ರಾರಂಭಿಸಿದರು.

| ಕ್ರ.ಸಂ | ಮಾಹಿತಿ | ಕ್ರಮವಹಿಸಬೇಕಾದ ಅಧಿಕಾರಿಗಳು |
|---|---|---|
| ❖ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) | |
| | ಕಾಮಗಾರಿ ಇಲಾಖೆ (Engineering Department) | |
| 1 | ✚ ಶ್ರೀಮತಿ ಪಿ.ಸೌಮ್ಯ ಸದಸ್ಯರು (ಶಾಂತಿನಗರ)ರವರು ತಮ್ಮ ಪತ್ರದಲ್ಲಿ : ಜೆ.ಕೆ ಮರ ಮುಖ್ಯರಸ್ತೆಯ ವಿನಾಯಕ ನಗರದಲ್ಲಿನ ಅನಧಿಕೃತ ಶೆಡ್‌ನ್ನು ತೆರವುಗೊಳಿಸಲು ಕೋರಿರುತ್ತಾರೆ.<br>✚ ನ್ಯಾರಿಸ್ ರಸ್ತೆಯಲ್ಲಿ ಪಾಟ್‌ಹೋಲ್ ಮುಚ್ಚಲು ಕೋರಿರುತ್ತಾರೆ<br>✚ ವಿನಾಯಕನಗರ ದಿಂದ ಶಾಂತಿನಗರಕ್ಕೆ ಸಂಪರ್ಕ ಕಲ್ಪಿಸಿರುವ ರಸ್ತೆ ಒತ್ತುವರಿಯಾಗಿರುವುದಾಗಿ ತಿಳಿಸಿರುತ್ತಾರೆ.<br>✚ Citizen's Welfare association of Richmond town & Langford town ರವರ ಪತ್ರದಲ್ಲಿ – ಬರ್ಲಿ ಸ್ಟ್ರೀಟ್ ಅಡ್ಡರಸ್ತೆಯಲ್ಲಿರುವ ಸ್ಕ್ರಪ್ ಅಂಗಡಿಯವರು ಪಾದಚಾರಿ ಮಾರ್ಗ ಹಾಗೂ ರಸ್ತೆಗೆ ಅನಧಿಕೃತವಾಗಿ ಅತಿಕ್ರಮಣ ಮಾಡಿರುವುದು ಕಂಡುಬಂದಿದ್ದು ಸದರಿ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿದರು.<br>✚ ಶ್ರೀಮತಿ ಎನ್ ರೇಣುಕಾ ದೇವಿ ರವರು ತಮ್ಮ ಪಾತ್ರದಲ್ಲಿ ಆನೇಪಾಳ್ಯ ರಸ್ತೆಯಲ್ಲಿ ಬಿ .ಬಿ.ಎಂಮ್ .ಪಿ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕ (ಆರ್ ಓ ವಾಟರ್ ಪ್ಲಾಂಟ್) ಅಳವಡಿಸಲು ಕೋರಿದರು | AEE(SN)AE<br>WARD-117<br>BBMP |
| 2 | ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ (BWSSB DEPARTMENT) | |
| | ✚ ಶ್ರೀಮತಿ ಎನ್ ರೇಣುಕಾ ದೇವಿ ರವರು ತಮ್ಮ ಪಾತ್ರದಲ್ಲಿ ಆನೇಪಾಳ್ಯ ರಸ್ತೆಯಲ್ಲಿ BWSSB ವತಿಯಂದ ಒಳಚರಂಡಿ ಕೊಳವೆಗಳನ್ನು ಅಳವಡಿಸಲು ಹಾಗೂ ಮನೆಗಳಿಗೆ ಸಂಪರ್ಕ ಕೊಡಿಸಲು ಕೋರಿದ್ದರು<br>✚ ಶ್ರೀ ಇಸ್ಮಾಯಿಲ್ ಮಿರ್ಜಾ ಸದಸ್ಯರು ತಮ್ಮ ಪತ್ರದಲ್ಲಿ, ಲಕ್ಷ್ಮಿರಸ್ತೆ 9ನೇ ಅಡ್ಡರಸ್ತೆಯಲ್ಲಿ BWSSB , ಕಾಮಗಾರಿ ಪ್ರಗತಿಯಲ್ಲಿದು ಆದನ್ನು ಆದಷ್ಟು ಬೇಗ ಮೂಗಿಸಿಕೊಡಲು ಕೋರಿದರು<br>✚ ಶ್ರೀ ವೆಂಕಟಶ್ ಅವರು ತಮ್ಮ ಪಾತ್ರದಲ್ಲಿ ಆನೇಪಾಳ್ಯ 5ನೇ ಅಡ್ಡ ರಸ್ತೆಯಲ್ಲಿ ಹೊಸದಾಗಿ ಸ್ಯನಿಟರಿ ಲೈನ್ ಅಳವಡಿಸಲು ಕೋರಿದ್ದರು<br>✚ Citizen's Welfare association of Richmond town & Langford town ರವರ ಪತ್ರದಲ್ಲಿ ರಿಚ್ಮಂಡ್ ಟೌನ್ ಹಾಗೂ ಲ್ಯಾಂಗ್ ಫೋರ್ಡ್ ಟೌನ್ ರಸ್ತೆಗಳಲ್ಲಿ ಸ್ಯನಿಟರಿ ಪೈಪ್ ಗಳು ಹೊಡದುಹೋಗಿದ್ದು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು ಸದರಿ ಬಗ್ಗೆ ಸುಕ್ತ ಕ್ರಮಕೈಗೊಳ್ಳಲು ಕೋರಿದರು.<br>✚ ಲ್ಯಾಂಗ್ ಫೋರ್ಡ್ ರಸ್ತೆಯಲ್ಲಿ BWSSB , ಕಾಮಗಾರಿ ಪ್ರಗತಿಯಲ್ಲಿದು ಆದನ್ನು ಆದಷ್ಟು ಬೇಗ ಮೂಗಿಸಿಕೊಡಲು ಕೋರಿದರು | AEE&AE(BWSSB |

Scanned with CamScanner

...ರು ಮಹಾನಗರ ಪಾಲಿಕೆ
... ಕಛೇರಿ, 17ನೇ ಮಹಡಿ, ಪಿ.ಯು.ಕಟ್ಟಡ
...ರು. ...5-02-2021

| | | |
|---|---|---|
| 3 | ಅರಣ್ಯ ಇಲಾಖೆ (Forest Department) | |
| | ✚ ಶ್ರೀ ಇಸ್ಮಾಯಿಲ್ ಮಿರ್ಜಾ ಸದಸ್ಯರು ತಮ್ಮ ಪತ್ರದಲ್ಲಿ, ಲಕ್ಷ್ಮಿರಸ್ತೆ 9ನೇ ಅಡ್ಡರಸ್ತೆಯಲ್ಲಿ ಮರದ ಬೇರುಗಳಿಂದ ತಮ್ಮ ಕಟ್ಟಡಕ್ಕೆ ಹಾನಿಯಾಗುತ್ತಿದ್ದು ಸೂಕ್ತ ಕ್ರಮಕೈಗೊಳ್ಳಲು ಕೋರಿದರು.<br>✚ ಶಾಂತಿನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ನಂ:117 ಶಾಂತಿನಗರ ವ್ಯಾಪ್ತಿಯ ಆನೇಪಾಳ್ಯ ರಸ್ತೆಯ ಕುಮ್ಮಣ್ಣಿ ವೃತ್ತಕ್ಕೆ ಹೊಂದಿಕೊಂಡಿರುವ ಅವಿಸ-ರವಿ ಎಂಬುವರ ಮನೆಯ ಮುಂದೆ ಹತ್ತಿಮರ ಇರುವುದು ಅದರ ಕೊಂಬೆಗಳು ಮನೆಯ ಶೀಟಿನ ಮೇಲೆ ಬೀಳುತ್ತಿದ್ದು ಬಹಳಾ ತೊಂದರೆಯಾಗುತ್ತಿದ್ದು ಸೂಕ್ತ ಕ್ರಮಕೈಗೊಳ್ಳಲು ಕೋರಿದರು | DCF-FOREST BBMP |
| 4 | ವಿದ್ಯುತ್ ಇಲಾಖೆ (ELECTRICAL department BBMP) | |
| | ✚ ಶ್ರೀ ಇಸ್ಮಾಯಿಲ್ ಮಿರ್ಜಾ ಸದಸ್ಯರು ತಮ್ಮ ಪಾತ್ರದಲ್ಲಿ, ರೀಚ್ಮಂಡ್ ಟೌನ್ನಲ್ಲಿ ಬೀದಿ ದೀಪಗಳ ಕೊರತ್ತೆ ಇದ್ದು ಸೂಕ್ತ ಕ್ರಮಕೈಗೊಳ್ಳಲು ಕೋರಿದರು.<br>✚ ಶ್ರೀ ವೆಂಕಟೇಶ್ ಅವರು ತಮ್ಮ ಪಾತ್ರದಲ್ಲಿ, ಆನೇಪಾಳ್ಯ ಅಡ್ಡರಸ್ತೆಗಳಲ್ಲಿ ಬೀದಿ ದೀಪಗಳ ಕೊರತೆ ಇದ್ದು ಸೂಕ್ತ ಕ್ರಮಕೈಗೊಳ್ಳಲು ಕೋರಿದರು | AEE&AE ELECTRICAL |
| 4 | ಪೋಲೀಸ್ ಇಲಾಖೆ (ಸಂಚಾರ ಮತ್ತು ಕಾ&ಸು) (Traffic Police, Law & Order) | |
| | ✚ ಶ್ರೀಮತಿ ಎನ್ ರೇಣುಕಾ ದೇವಿ ರವರು ತಮ್ಮ ಪತ್ರದಲ್ಲಿ ಆನೇಪಾಳ್ಯ ರಸ್ತೆಯಲ್ಲಿ ಕೆಲವು ದುಷ್ಕರ್ಮಿಗಳು ಮಾದಕ ದ್ರವ್ಯ ಸೇವನೆ ಮಾಡಿ ಸಾರ್ವಜನಿಕರಿಗೆ ಕಿರುಕುಳ/ತೊಂದರೆಯಾಗುತ್ತಿದ್ದು Police ಇಲಾಖೆಯಿಂದ ಸುರಕ್ಷತೆ ನೀಡಲು ಕೋರಿದರು | C.I/PSI(L&O) |

ಅಂತಿಮವಾಗಿ ಅಧ್ಯಕ್ಷಕರು ಮಾತನಾಡುತ್ತಾ ಸಾರ್ವಜನಿಕರಿಂದ ಹಾಗೂ ಕಮಿಟಿ ಸದಸ್ಯರುಗಳಿಂದ ದೂರನ್ನು ಸ್ವೀಕರಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸಲು ಕೋರುತ್ತಾ, ಮುಂದಿನ ಸಭೇಯಷ್ಟರಲ್ಲಿ ಸಂಬಂಧಿಸಿದ ಎಲ್ಲಾ ದೂರುಗಳನ್ನು ಪರಿಗಣಿಸಿ ತಿಳಿಸಲು ಕೋರಿದೆ ಹಾಗೂ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು, ಮುಂದಿನ ಸಭೆಯಲ್ಲಿ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಮಿತಿಯ ಸದಸ್ಯರುಗಳಿಗೆ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರುಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಕಾರ್ಯದರ್ಶಿಗಳು<br>ಸಹಾಯಕ ಅಭಿಯಂತರರು<br>ವಾರ್ಡ್ -117 ಶಾಂತಿನಗರ | ಅಧ್ಯಕ್ಷರು ಮತ್ತು<br>ನೋಡಲ್ ಅಧಿಕಾರಿ<br>ವಾರ್ಡ್ -117 ಶಾಂತಿನಗರ |

<u>ಪ್ರತಿಯನ್ನು :</u>

1. ಮಾನ್ಯ ಆಯುಕ್ತರು, ಆಪ್ತ ಸಹಾಯಕರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ವಲಯ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5. ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ, ಉಪ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.

Scanned with CamScanner